ದಿನಾಂಕಃ **17-09-2024** ರಂದು ಸಾಕ್ಷಿಗೆ ಪುನಃ ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು ಶ್ರೀ ಎಸ್ ಎಸ್ ವಕೀಲರಿಂದಃ

ಶಿವಣ್ಣನವರು ನನ್ನ ತಂದೆ. ನನ್ನ ತಾತನ ಹೆಸರು ಮಂದಾಲಯ್ಯ. ಅವರಿಗೆ 4 ಜನ ಮಕ್ಕಳು ಅವರ ಹೆಸರುಗಳು ವೆಂಕಟನರಸಯ್ಯ, ಗೋವಿಂದಪ್ಪ, ಶಿವಣ್ಣ ಹಾಗೂ ಪಾಪಣ್ಣ. ಅವರಿಗೆ ಒಬ್ಬ ಹೆಣ್ಣು ಮಗಳಿದ್ದು ಅವರು ಯಾರು ಎಂದು ನನಗೆ ತಿಳಿದಿರುವುದಿಲ್ಲ. ಈ ದಾವಾ ಆಸ್ತಿಯ ಸ್ವತ್ತುಗಳು ನನ್ನ ತಂದೆಯ ಸ್ವಯಾರ್ಜಿತ ಆಸ್ತಿಯಾಗಿರುತ್ತದೆ. ಅದೇ ರೀತಿ ನನ್ನ ತಾತನ ಆಸ್ತಿಗಳು ಇದ್ದು ಅದು ಈಗ ಏನಾಗಿದೆ ಎಂದು ನನಗೆ ಗೊತ್ತಿಲ್ಲ. ಅದೇ ರೀತಿ ಅವರಿಗೆ ಎಷ್ಟು ಐಟಂ ಆಸ್ತಿಗಳು ಇತ್ತು ಎಂಬುದರ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ಈ ದಾವಾ ಆಸ್ತಿಯ ಸ್ವತ್ತುಗಳು ನನ್ನ ತಂದೆ ಸಂಪಾದನೆ ಮಾಡಿ ಖರೀದಿ ಮಾಡಿರುವಂತಹ ಆಸ್ತಿಗಳಾಗಿರುತ್ತವೆ. ನನ್ನ ತಂದೆಯವರು ಕೆ.ಬಿ ಕ್ರಾಸ್ ನಲ್ಲಿ ಒಂದು ದಿನಸಿ ಅಂಗಡಿಯನ್ನು ಇಟ್ಟುಕೊಂಡಿದ್ದರು. ಸದರಿ ದಿನಸಿ ಅಂಗಡಿ ಇದ್ದಂತಹ ಜಾಗವನ್ನು ನನ್ನ ತಂದೆಯವರು ಖರೀದಿ ಮಾಡಿರುತ್ತಾರೆ. ಅದನ್ನು ಖರೀದಿ ಮಾಡಿದ ನಂತರ ಅಂಗಡಿಯನ್ನು ನಿರ್ಮಿಸಿರುತ್ತಾರೆ. ಸದರಿ ಅಂಗಡಿ ಇದ್ದಂತಹ ಜಾಗದಲ್ಲಿ ಎಷ್ಟು ಐಟಂ ನ ಆಸ್ತಿಗಳು ಇತ್ತು ಎನ್ನುವುದು ನನಗೆ ಗೊತ್ತಿಲ್ಲ. ಸದರಿ ಅಂಗಡಿಯ ಹಿಂಭಾಗದಲ್ಲಿ ವಾಸದ ಮನೆಗಳು ಇದ್ದವು. ನನ್ನ ತಂದೆಯವರು 2005 ನೇ ಇಸವಿಯಲ್ಲಿ ಮರಣ ಹೊಂದಿರುತ್ತಾರೆ. ಅಷ್ಟರಲ್ಲಿ ನಮಗೆಲ್ಲರಿಗೂ ಮದುವೆಯಾಗಿತ್ತು. ಅವರು ಮರಣ ಹೊಂದಿದ ನಂತರ ನನ್ನ ತಮ್ಮನಾದ 1 ನೇ ಪ್ರತಿವಾದಿಯು ಸದರಿ ಅಂಗಡಿಯನ್ನು ನಡೆಸಿಕೊಂಡು ಹೋಗುತ್ತಿರುತ್ತಾರೆ.

1 ನೇ ಪ್ರತಿವಾದಿಗೆ ಆದಾಯವು ಅದೇ ಅಂಗಡಿಯಿಂದ ಬರುತ್ತಿತ್ತು ಅದನ್ನು ಬಾಡಿಗೆಗೆ ನೀಡಿರುತ್ತಾರೆ. ಕಿಬ್ಬನಹಳ್ಳಿ ಸರ್ಕಲ್ ಹತ್ತಿರ ಇರುವಂತಹ 1 ಮನೆ ಹಾಗೂ ಮಾತಾ ರೆಸಿಡೆನ್ಸಿ ಎದುರುಗಡೆ ಇರುವಂತಹ ಒಂದು ಮನೆಯನ್ನು ಬಾಡಿಗೆಗೆ ನೀಡಿರುತ್ತಾರೆ. ಅದನ್ನು ಎಷ್ಟು ವರ್ಷಗಳಿಂದ ಬಾಡಿಗೆಗೆ ನೀಡಿದ್ದರು ಹಾಗೂ ಎಷ್ಟು ಬಾಡಿಗೆಯನ್ನು ಪಡೆಯುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ಈಗ ಆ ಅಂಗಡಿಯು ಇದೆಯೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ನಮ್ಮ ತಂದೆಯವರು ಮರಣ ಹೊಂದಿದ ಬಳಿಕ ನಾವು ಅಲ್ಲಿಗೆ ಹೋಗುವುದನ್ನು ನಿಲ್ಲಿಸಿರುತ್ತೇವೆ. ಸಾಕ್ಷಿಯು ಮುಂದುವರೆದು 1 ನೇ ಪ್ರತಿವಾದಿಯು ನಮ್ಮನ್ನು ಕರೆಯುವುದಿಲ್ಲ ಆದ ಕಾರಣ ನಾವು ಹೋಗುವುದಿಲ್ಲ ಎಂದು ನುಡಿಯುತ್ತಾರೆ. ನಾವು 3 ಜನ ವಾದಿಯರು ಸಹ ಅಲ್ಲಿಗೆ ಹೋಗುವುದಿಲ್ಲ ಹಾಗೂ ನಾವು ವಿಶ್ವಾಸದಿಂದ ಇದ್ದೇವೆ ಎಂದರೆ ಸರಿ. 1 ನೇ ಪ್ರತಿವಾದಿಯ ಜೊತೆ ನಮ್ಮ ತಂದೆ ಮರಣ ಹೊಂದಿದ ಕಾಲದಿಂದಲೂ ಯಾವುದೇ ಮಾತುಕತೆ ಅಥವಾ ವಿಶ್ವಾಸ ಇರುವುದಿಲ್ಲ. ಈ ದಾವಾ ಆಸ್ತಿಯಲ್ಲಿ ಎಷ್ಟು ಐಟಂಗಳು ಇವೆ ಹಾಗೂ ಅವುಗಳ ಚೆಕ್ಕುಬಂಧಿ ಹಾಗೂ

ವಿಸ್ತೀರ್ಣ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಬಿ.ಹೆಚ್ ರಸ್ತೆ ಅಗಲ ಮಾಡಿದ್ದ ಪರಿಣಾಮ ಅಂಗಡಿಗಳು ಹೋಗಬಹುದು ಎಂದು ಹೇಳುತ್ತಾರೆ. ನಾವು ಎಸ್ ಎಲ್ ಎ ಓ ರವರ ಮುಂದೆ ನಮ್ಮ ನಾಲ್ಕು ಜನರಿಗೂ ಪರಿಹಾರವನ್ನು ನೀಡಿ ಎಂದು ಅರ್ಜಿಯನ್ನು ಸಲ್ಲಿಸಿರುತ್ತೇನೆ. ಸದರಿ ಬಿ. ಹೆಚ್ ರಸ್ತೆಯು ಅಗಲೀಕರಣ ವಾಗುವುದರ ಬಗ್ಗೆ ಯಾವುದಾದರೂ ನೋಟೀಫಿಕೇಷನ್ ಅಥವಾ ಗುರುತನ್ನು ಮಾಡಿರುತ್ತಾರೆ ಎಂದರೆ ಅದು ನಮಗೆ ಗೊತ್ತಿಲ್ಲ ಎಂದು ಹೇಳುತ್ತಾರೆ.

ನನ್ನ ತಂದೆಯವರಿಗೆ ಅವರು ಮಾಡಿಕೊಂಡಿದ್ದಂತಹ ದಿನಸಿ ಅಂಗಡಿಯಿಂದ ಮಾತ್ರ ಆದಾಯ ಬರುತ್ತಿತ್ತು. ನನ್ನ ತಂದೆಯವರುಹೆಣ್ಣು ಮಕ್ಕಳಿಗೆ ಮದುವೆ ಮಾಡುವಂತಹ ಸಮಯದಲ್ಲಿ ವಡವೆ ವಸ್ತ್ರ ಹಾಗೂ ಮದುವೆ ಖರ್ಚನ್ನು ನೀಡಿ ಅಂದಿನ ಕಾಲಕ್ಕೆ ಏನು ಬೇಕಾಗಿತ್ತೋ ಅದನ್ನು ಮಾಡಿದ್ದರು ಎಂದರೆ ಸರಿ. ನನ್ನ ಮದುವೆಯು 1992 ನೇ ಇಸವಿಯಲ್ಲಿ ಆಗಿರುತ್ತದೆ. ನನ್ನ ತಂಗಿಯರ ಮದುವೆ ಯಾವ ಇಸವಿಯಲ್ಲಿ ಆಗಿದೆ ಎಂಬುದು ನನಗೆ ನೆನಪಿಲ್ಲ ಅದರೆ ಅವರ ಮದುವೆಗೆ ನಾನು ಹೋಗಿರುತ್ತೇನೆ. ಅವರ ಮದುವೆಗೂ ಸಹ ನಮ್ಮ ತಂದೆಯವರು ಖರ್ಚು ಮಾಡಿರುತ್ತಾರೆ ಎಂದರೆ ಸರಿ. ನನ್ನ ತಂದೆಯವರು ಬ್ಯಾಂಕಿನಲ್ಲಿ ಯಾವುದೇ ಹಣವನ್ನು ಇಟ್ಟಿರಲಿಲ್ಲ ಮುಂದುವರೆದು ನನ್ನ ತಂದೆಯವರು ಅಂಗಡಿಯಿಂದ ಬರುತ್ತಿದ್ದ ಆದಾಯ ಹೊರತು ಪಡಿಸಿ ಬೇರೆ ಯಾವುದು ಇರಲಿಲ್ಲ. 1 ನೇ ಪ್ರತಿವಾದಿಯು ಹೇಳುವಂತೆ ನಮ್ಮ ತಂದೆಯವರು ನಮ್ಮ ಮದುವೆಗಳಿಗೆಂದು ಸಾಲ ಮಾಡಿರುತ್ತಾರೆ ಎಂದರೆ ಅದು ಸರಿಯಲ್ಲ ಅದರ ಬಗ್ಗೆ ಯಾರಿಗೂ ಮಾಹಿತಿ ಇರುವುದಿಲ್ಲ. ಅದೇ ರೀತಿ ಅವರು ಯಾವ ಆಸ್ತಿಗಳನ್ನು ಮಾರಾಟ ಮಾಡಿರುತ್ತಾರೆ ಎಂದು ಸಹ ನನಗೆ ಗೊತ್ತಿಲ್ಲ. ಈ ದಾವಾ ಆಸ್ತಿಯನ್ನು ನಾವು ನಮ್ಮ ತಮ್ಮನಾದ 1 ನೇ ಪ್ರತಿವಾದಿಯ ವಿರುದ್ಧ ಮಾತ್ರ ನಮಗೆ ಭಾಗ ಬರಬೇಕು ಎಂದು ದಾವೆಯನ್ನು ಹೂಡಿರುತ್ತೇನೆ 1 ನೇ ಪ್ರತಿವಾದಿಯು ಏನು ಕೆಲಸ ಮಾಡುತ್ತಾರೆ ಎಂಬುದರ ಬಗ್ಗೆ ನನಗೆ ಮಾಹಿತಿ ಇಲ್ಲ. ನಮ್ಮ ತಾಯಿಯವರು 2012 ನೇ ಇಸವಿಯಲ್ಲಿ ಮರಣ ಹೊಂದಿರುತ್ತಾರೆ. ಅವರು ನೇ ಪ್ರತಿವಾದಿಯ ಜೊತೆ ವಾಸವಿದ್ದರು. ನಮ್ಮ ತಾಯಿಯವರು ತೀರಿಕೊಂಡ ಬಳಿಕ ಅವರ ಅಂತಿಮ ಸಂಸ್ಕಾರವನ್ನು 1 ನೇ ಪ್ರತಿವಾದಿಯವರೇ ಮಾಡಿರುತ್ತಾರೆ ಎಂದರೆ ಸರಿ. ನಿಪಿ-1 ರಲ್ಲಿ ನನ್ನ ತಂದೆಯ ತಂಗಿಯ ಹೆಸರು ನಮೂದಾಗಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ ಹಾಗೂ ಅದೇ ರೀತಿ ಯಾರ ಯಾರ ಹೆಸರುಗಳು ಇವೆ ಎಂಬುದು ನನಗೆ ಗೊತ್ತಿಲ್ಲ. ನಾನು ಮೇಲೆ ಹೇಳಿರುವ ಹಾಗೆ ಎಷ್ಟು ಅಂಗಡಿ ಮಳಿಗೆಗಳು ಇದೆ ಎಂಬುದು ನನಗೆ ಗೊತ್ತಿಲ್ಲ. ಅದಕ್ಕೆ ಸಂಬಂಧಪಟ್ಟಿರುವ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ ಆದರೆ ಅವುಗಳು ಯಾವುದು ಎಂದು ನನಗೆ ಗೊತ್ತಿಲ್ಲ. ಅದೇ ರೀತಿ ಈ ದಾವಾ ಆಸ್ತಿಯ ಕಂದಾಯ ದಾಖಲೆಗಳು ಯಾರ ಹೆಸರಿಗೆ ಇದೆ ಎಂಬುದು ಸಹ ನನಗೆ ಗೊತ್ತಿಲ್ಲ. ನಮಗೆ ದಾವಾ ಸ್ವತ್ತುಗಳ ದಾಖಲಾತಿಗಳನ್ನು ನಾನೇ ತೆಗೆಸಿ ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ಅದು ಯಾವುದು

ಎಂಬುದು ನನಗೆ ಗೊತ್ತಿಲ್ಲ ಹಾಗೂ ಅದು ಎಷ್ಟು ಎಂಬುದು ಸಹ ನನಗೆ ಗೊತ್ತಿಲ್ಲ. ಈ ದಾವಾ ಆಸ್ತಿಯ ಎಷ್ಟು ಐಟಂ ಗಳಿಗೆ ನಾವು ದಾವೆಯನ್ನು ಹೂಡಿರುತ್ತೇವೆ ಎಂಬುದು ನನಗೆ ಗೊತ್ತಿಲ್ಲ.

2 ನೇ ಪ್ರತಿವಾದಿಯು ಯಾರು ಎಂಬುದು ನನಗೆ ಗೊತ್ತಿಲ್ಲ. ನಾನು ಅವರ ಮೇಲೆ ಯಾವುದೇ ಪರಿಹಾರವನ್ನು ಕೇಳಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅವರು ಯಾರು ಎಂದು ನನಗೆ ತಿಳಿಯದ ಕಾರಣ ನಾನು ಯಾವ ಪರಿಹಾರವನ್ನು ಕೇಳಿರುವುದಿಲ್ಲ. ಸದರಿ ದಾವೆಯನ್ನು ಹೂಡುವ ಮುಂಚಿತವಾಗಿ ಈ ದಾವಾ ಆಸ್ತಿಯ ಸ್ವತ್ತುಗಳು ನಮ್ಮ ತಂದೆ ಹೆಸರಿಗೆ ಇದೆ ಎಂಬುದನ್ನು ಖಚಿತ ಪಡಿಸಿಕೊಂಡು ದಾವೆಯನ್ನು ಹೂಡಿರುತ್ತೇನೆ. ಅದು ಈಗ ಯಾರ ಹೆಸರಿಗೆ ಇದೆ ಎಂಬುದು ನನಗೆ ಗೊತ್ತಿಲ್ಲ. ನಾನು ಮದುವೆಯಾದ ದಿನದಿಂದಲೂ ನನ್ನ ಗಂಡನ ಮನೆಯಲ್ಲೇ ವಾಸವಿದ್ದೇನೆ ಎಂದರೆ ಸರಿ. ಅದೇ ರೀತಿ ಈ ದಾವಾ ಆಸ್ತಿಯ ಜಮೀನು ಅಥವಾ ಸ್ವತ್ತುಗಳನ್ನು ನಾವು ಎಂದಿಗೂ ಅನುಭವಿಸಿರುವುದಿಲ್ಲ ಎಂದರೆ ಸರಿ. ನಮಗೆ ಈ ದಾವಾ ಅಸ್ತಿಯಲ್ಲಿ ಯಾವುದೇ ಹಕ್ಕು ಇಲ್ಲದಿರುವ ಕಾರಣ ನಾವು ಅದರ ಬಗ್ಗೆ ಯಾವುದೇ ಮಾಹಿತಿಯನ್ನು ತಿಳಿದು ಕೊಂಡಿರುವುದಿಲ್ಲ ಸರಿಯಲ್ಲ. ನಾವು ಬಿ. ಹೆಚ್ ರಸ್ತೆಯು ಅಗಲೀಕರಣಕ್ಕೆ ಹೋಗುತ್ತದೆ ಎಂಬುದನ್ನು ತಿಳಿದುಕೊಂಡ ನಂತರ ಈ ದಾವೆಯನ್ನು ಹೂಡಿರುತ್ತೇವೆ ಎಂದರೆ ಸರಿ. ಅದರ ಪರಿಹಾರದ ಹಣವನ್ನು 1 ನೇ ಪ್ರತಿವಾದಿಯು ತೆಗೆದುಕೊಳ್ಳಬಾರದು ಹಾಗು ಅದು ನಮಗೂ ಸಹ ಬರಬೇಕು ಎಂದು ಈ ದಾವೆಯನ್ನು ಹೂಡಿರುತ್ತೇವೆ ಎಂದರೆ ಸರಿ.

ಈ ಹಂತದಲ್ಲಿ ಶ್ರೀ ಎಸ್ ಎಸ್ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶವನ್ನು ಕೋರಿದ್ದು ಕೋರಿಕೆ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಿ ಓದಿ ಹೇಳಿ, ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.)

ಅಧಿಕ ಸಿವಿಲ್ ನ್ಯಾಯಾಧೀಶರು
ತಿಪಟೂರು.